IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ವಚನಗಳಲ್ಲಿ ಆತ್ಮವಿಮರ್ಶೆ

**ದ್ಯಾವಣ್ಣ ಸುಂಕೇಶ್ವರ**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಲೊಯೋಲ ಕಾಲೇಜು, ಮಾನವಿ
ಜಿಲ್ಲೆ: ರಾಯಚೂರು

ಕರ್ನಾಟಕ, ಭಾರತ

**ABSTRACT:**

ಪ್ರಸ್ತುತ ಸಂಶೋಧನಾ ಲೇಖನವು ಹನ್ನೆರಡನೆಯ ಶತಮಾನದಲ್ಲಿ ಆತ್ಮವಿಮರ್ಶೆಗೆಡೆಮಾಡಿಕೊಟ್ಟ ವಚನಗಳ ಕುರಿತು ವಿಶ್ಲೇಷಿಸಲಾಗಿದೆ. ವಚನಕಾರರು ಜನಸಾಮಾನ್ಯರಿಗೆ ಗೈದ ನೀತಿ ಬೋಧನೆಯ ಪರಿ, ಸರಳ ವಚನಗಳ ಮೂಲಕ ಆತ್ಮೋದ್ಧಾರದ ಹಾದಿಯನ್ನು ಹೇಗೆ ಕಂಡುಕೊಳ್ಳಬಹುದು ಎನ್ನುವುದರ ಬಗ್ಗೆ ಪ್ರಸ್ತಾಪಿಸಲಾಗಿದೆ. ಅನುರಾಗ, ಅನುಬಂಧ ಶಾಶ್ವತವಲ್ಲ ಮುಕ್ತಿಯ ಹಾದಿಯನ್ನು ಕಂಡುಕೊಳ್ಳುವುದೇ ಪರಮಶ್ರೇಷ್ಠವಾದುದು. ಸ್ವಾವಲಂಬಿಗಳಾಗಿ ಬದುಕುತ್ತಾ ಆತ್ಮೋನ್ನತಿಗಾಗಿ ಕೈಗೊಂಡ ಕಾಯಕ, ಭಕ್ತಿ, ಅರ್ಚನೆ, ನಡೆ, ನುಡಿಗಳಲ್ಲಿ ವಚನಕಾರರ ಪ್ರಾಮಾಣಿಕತೆ ಮತ್ತು ನುಡಿದಂತೆ ನಡೆದ ಶರಣ ಶರಣೆಯರ ಜೀವನ ಕುರಿತು ಚರ್ಚಿಸಲಾಗಿದೆ. ವಚನಗಳಲ್ಲಿನ ತಾತ್ಪರ್ಯವು ಇಂದಿನ ಎಲ್ಲಾ ಜನಸಾಮಾನ್ಯರ ನಿಷ್ಕಲ್ಮಶ ಬದುಕಿಗೆ ಮಾರ್ಗದರ್ಶನ ನೀಡುತ್ತವೆ. ಒಟ್ಟಿನಲ್ಲಿ ಈ ಲೇಖನದ ತಿರುಳು ಅಂತರಂಗದ ಶೋಧನೆಯಾಗಿದೆ.

**KEYWORDS:**

ದೇವರ ದಾಸಿಮಯ್ಯನ ವಚನ, ಅಲ್ಲಮಪ್ರಭುಗಳ ವಚನ, ಬಸವಣ್ಣನ ವಚನ, ಅಕ್ಕಮಹಾದೇವಿಯ ವಚನ, ಸಿದ್ಧರಾಮನ ವಚನ, ಆಯ್ದಕ್ಕಿ ಲಕ್ಕಮ್ಮನ ವಚನ, ಸತ್ಯಕ್ಕನ ವಚನ

ಹನ್ನೆರಡನೇ ಶತಮಾನದ ಶರಣರ ವಚನಗಳು ಜನಸಾಮಾನ್ಯರ ಜೀವನಾಡಿಯಾಗಿವೆ. ಸುಂದರ ಮತ್ತು ಸರಳ ಬದುಕಿಗೆ ದಾರಿದೀಪೋಕ್ತಿಗಳಾಗಿವೆ. 'ಕನ್ನಡದ ಆದ್ಯ ವಚನಕಾರ'ರಾದ ಜೇಡರ ದಾಸಿಮಯ್ಯನಿಂದ ಪ್ರಸಿದ್ಧಿ ಪಡೆದು ದೇಶ ವಿದೇಶಗಳ ಜನಮಾನಸದಲ್ಲಿ ಪ್ರಕಾಶಮಾನವಾದ ಬೆಳಗನ್ನು ಪಸರಿಸಿವೆ. ಜೀವನಾನುಭವದ ಸಾರವೇ ವಚನಗಳಲ್ಲಿ ಅಡಗಿದೆ. ವಚನಗಳಲ್ಲಿ ಸಾಮಾಜಿಕ ವಿಚಾರಧಾರೆಗಳು, ಕಾಯಕ ನಿಷ್ಠೆ, ಮಾನವೀಯ ಮೌಲ್ಯಗಳು, ಸ್ವಾರ್ಥ ರಹಿತ ಸೇವೆ, ಕಾಳಜಿ, ಪರಿಶ್ರಮ, ದಾಸೋಹ, ಸಮಾನತೆ, ಆತ್ಮನಿವೇದನೆ ಹಾಗೂ ಆತ್ಮವಿಮರ್ಶೆ ಹೀಗೆ ಹಲವಾರು ಆಯಾಮಗಳು ಓದುಗರನ್ನು ಮೂಕವಿಸ್ಮಿತರನ್ನಾಗಿ ಮಾಡಿವೆ. ವಚನಗಳು ಸರಳವಾಗಿದ್ದು, ಮಾನವೀಯ ಗುಣಗಳನ್ನು ನಾಗರಿಕ ಸಮಾಜದಲ್ಲಿ ಬೆಳೆಸುತ್ತವೆ. ಮನುಷ್ಯರಲ್ಲಿರುವ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳನ್ನು ಬೇರು ಸಮೇತ ಕೀಳಲು ಸಹಾಯಕವಾಗಿವೆ. ಹನ್ನೆರಡನೆಯ ಶತಮಾನದ ವಚನಕಾರರಾದ ದೇವರ ದಾಸಿಮಯ್ಯ, ಅಲ್ಲಮ ಪ್ರಭು, ಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮ, ಆಯ್ದಕ್ಕಿ ಲಕ್ಕಮ್ಮ, ಸತ್ಯಕ್ಕ ಹೀಗೆ ವಚನಕಾರರು ಆತ್ಮವಿಮರ್ಶೆಗೆ ಪ್ರಾಮುಖ್ಯತೆ ನೀಡಿ, ನೀತಿ ಬೋಧನೆ ಗೈದಿದ್ದಾರೆ.

ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶರಣರಿಗಿಂತಲೂ ಪೂರ್ವಿಕನಾಗಿದ್ದು ವೀರಶೈವ ಧರ್ಮದ ತತ್ವಗಳಿಗೆ ಅಡಿಗಲ್ಲಾಗಿ, ಆದ್ಯ ವಚನಕಾರರು ಎಂದು ಗುರಿತಿಸಿಕೊಂಡಿದ್ದ ದೇವರ ದಾಸಿಮಯ್ಯನು ಶಿವಭಕ್ತನಾಗಿದ್ದರೂ ಶಿವನ ಸನ್ನಿಧಿಗೆ ತೆರಳದೇ, ಕಾಯಕವನ್ನೇ ಕೈಲಾಸವನ್ನಾಗಿ ಮಾಡಿಕೊಂಡು, ಕಾಯಕದಲ್ಲಿಯೇ ಶಿವನನ್ನು ಆರಾಧಿಸಿ, ಶಿವನಕೃಪೆಗೆ ಪಾತ್ರನಾಗಿದ್ದನು. ಇವರ ಅನೇಕ ವಚನಗಳಲ್ಲಿ ನಿಷ್ಠುರವಾದ ಉಕ್ತಿಗಳು, ಶರಣರ ಮಹಿಮೆ, ಕಪಟ ಭಕ್ತಿಯ ಡಾಂಭಿಕತನ, ಕಾಯಕದಲ್ಲಿ ದೃಢನಿಷ್ಠೆ, ಆತ್ಮವಿಮರ್ಶೆ ಇನ್ನಿತರ ವಿಷಯಗಳನ್ನು ಆಧ್ಯಾತ್ಮಿಕ ದೃಷ್ಟಿಕೋನದಲ್ಲಿ ಅಭಿವ್ಯಕ್ತ ಪಡಿಸಲಾಗಿದೆ.

ಎನ್ನೊಡಲಾದರೆ ಎನ್ನಿಚ್ಛೆಯೊಳಿಹುದೆ
ನಿನ್ನೊಡಲಾದರೆ ನಿನ್ನಿಚ್ಛೆಯೊಳಿಹುದು
ಅದು ಎನ್ನೊಡಲೂ ಅಲ್ಲ, ನಿನ್ನೊಡಲೂ ಅಲ್ಲ.
ನೀ ಮಾಡಿದ ಜಗದ ಬಿನ್ನಾಣದೊಡಲು ಕಾಣಾ ರಾಮನಾಥ[1]

ಸಮಾಜದಲ್ಲಿ ಅನೇಕರು ದೈಹಿಕ ಆಕರ್ಷಣೆಗೆ ಒಳಗಾಗಿ ಸೌಂದರ್ಯೋಪಾಸಕರಾಗಿದ್ದಾರೆ. ಈ ಜೀವನ 'ನೀರ ಮೇಲಿನ ಗುಳ್ಳೆ ನಿಜವಲ್ಲ ಹರಿಯೇ' ಎನ್ನುವ ದಾಸರ ವಾಣಿಯನ್ನು ಮರೆತು ಬಿಟ್ಟಿದ್ದಾರೆ. ಹರಿದಾಸರಿಗಿಂತ ಪೂರ್ವದಲ್ಲಿ ವಚನಕಾರರು ದೇಹದ ಅಸ್ಥಿರತೆಯ ಕುರಿತು ವಿಷಾದ ವ್ಯಕ್ತಪಡಿಸಿದ್ದಾರೆ. ಅಂತರಂಗವನ್ನು ಅರಿತು ಸ್ಪಷ್ಟತೆಗಾಗಿ ದೇವರಲ್ಲಿ ಮೊರೆ ಹೋಗಿದ್ದಾರೆ. ಈ ದೇಹ ನನ್ನದೂ ಅಲ್ಲ, ದೇವರದೂ ಅಲ್ಲ, ನನ್ನದಾಗಿದ್ದರೆ, ನನ್ನ ಬಯಕೆಯಂತೆ ಇರುತ್ತಿತ್ತು. ದೇವರದಾಗಿದ್ದರೆ, ಹುಟ್ಟು, ಸಾವು ಇರುತ್ತಿರಲಿಲ್ಲ. ನಿನ್ನಿಂದ ಸೃಷ್ಟಿಯಾದ ಈ ಜಗತ್ತಿನಲ್ಲಿ ಒಯ್ಯಾರದಲಿ ಬಳುಕಿತಿದೆ ಈ ದೇಹ. ದೇವರು ಈ ಕಾಯವನ್ನು ತನ್ನಿಂದ ಬೇರ್ಪಡಿಸಿ, ಅರೆದು, ಒರೆದು ನೋಡಿ ನಂತರ ತನ್ನ ಅಡಿದಾವರೆಗಳಲ್ಲಿ ಆಶ್ರಯ ಕಲ್ಪಿಸುತ್ತಾನೆ. ಹುಟ್ಟಿದ ಮನುಷ್ಯ ಮರಣ ಹೊಂದಲೇಬೇಕು, ಹಾಗಾಗಿ ದೇಹದ ವ್ಯಾಮೋಹಕ್ಕೆ ಒಳಗಾಗದೆ, ದೇವರು ನಮಗೆ ಕೊಟ್ಟ ದಾನ ಎಂದು ಬಣ್ಣಿಸದೆ, ಎಲ್ಲರೂ ತಮ್ಮೊಳಗಿನ ಅಂತರಂಗವನ್ನು ಶೋಧಿಸಿದಾಗ ಮಾತ್ರ ದೇವರು ಮತ್ತು ಕಾಯದ ಮಧ್ಯೆ ಇರುವ ಅಂತರ ಕಂಡುಕೊಳ್ಳಲು ಸಾಧ್ಯ ಎನ್ನುವುದು ದೇವರ ದಾಸಿಮಯ್ಯನಿಂದ ಹೊರಹೊಮ್ಮಿದ ಅನುಭವದ ಉಕ್ತಿಯಾಗಿದೆ. ಇವರ ವಚನಗಳು ಓದುಗರ ಮನಸ್ಸಿನ ಮೇಲೆ ದೀರ್ಘ ಪ್ರಭಾವ ಬೀರಿದ್ದು, ದೇಹದ ಮೇಲಿನ ವ್ಯಾಮೋಹ ತ್ಯಜಿಸಲು ಸಹಾಯಕವಾಗಿವೆ.

ನಂತರ ಅಲ್ಲಮಪ್ರಭುಗಳು ನೇರ ನಿಷ್ಠುರವಾದಿ, ಬೆಡಗಿನ ವಚನಕಾರ, ವೀರಶೈವ ಲಿಂಗದವರಿಗೆ ಗುರುವಾಗಿ ಭಕ್ತಿ–ವೈರಾಗ್ಯವನ್ನು ಬೋಧಿಸಿದವರು. ಶರಣಕೂಟದಲ್ಲಿನ ಲೋಪದೋಷಗಳನ್ನು ವೈಚಾರಿಕ ದೃಷ್ಟಿಕೋನದಲ್ಲಿ ವಿಮರ್ಶಿಸಿ, ತಿದ್ದಿ, ಘನಗೊಳಿಸಿದವರು. "ಅಲ್ಲಮನ ವಚನಗಳು ಪ್ರತಿಭಟನಾತ್ಮಕ, ವಿಚಾರಾತ್ಮಕ ಹಾಗೂ ವಿಮರ್ಶಾತ್ಮಕ ಅಂಶಗಳನ್ನೊಳಗೊಂಡ ಸತ್ಯಾನ್ವೇಷಣೆಯ ದಿಕ್ಕಿಗೆ ಕೊಂಡೊಯ್ಯುತ್ತವೆ. ಇಂತಹ ಸಂದರ್ಭದಲ್ಲಿ ಅವನ ವಾಕ್ಶಕ್ತಿ ಹಾಗೂ ಪದಪ್ರಯೋಗಗಳು ನೇರವಾಗಿರುತ್ತವೆ. ಹೇಳಲಿಚ್ಛಿಸಿದ್ದನ್ನು ಅಳುಕದೆ ಹೇಳುವುದು ಇವನ ವಚನಗಳ ವೈಶಿಷ್ಟ್ಯ."[2] ಈ ಮಾತು ಅಕ್ಷರಶಃ ಸತ್ಯ. ಅಲ್ಲಮನು ಮನದಲ್ಲಿ ಕಾಮಲತೆಯ ಸೌಂದರ್ಯಕ್ಕೆ ಮರುಳನಾಗಿ, ವಿರಹ ಜ್ವಾಲೆಯಲ್ಲಿ ಬೆಂದು, ಹುಚ್ಚನಂತೆ ಅಲೆದಾಗ ಎಲ್ಲವೂ ನಶ್ವರವೆಂದರಿತು ಕಾಮಲತೆಯ ಮೇಲಿನ ಪ್ರೀತಿಯನ್ನು ದೇವರೆಡೆಗೆ ಪರಿವರ್ತಿಸಿಕೊಳ್ಳುತ್ತಾನೆ.

ಎಸೆಯದಿರು ಎಸೆಯದಿರು ಕಾಮ,
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ಇದು ಸಾಲದೇ ನಿನಗೆ?
ನಿನ್ನ ಬಾಣ ಹುಸಿಯಲದೇಕೋ!
ಗೋಗೇಶ್ವರ ಲಿಂಗದ ವಿರಹದಲ್ಲಿ ಬೆಂದವರ
ಮರಳಿ ಸುಡಲುಂಟೆ ಕಾಮಾ.[3]

ಕಾಮಲತೆ ಅಥವಾ ಮಾಯಾದೇವಿಯನ್ನು ಕಂಡಾಗ ಆಕರ್ಷಣೆಗೊಳಗಾಗುವಂತೆ ಮನ್ಮಥನು ಎಸೆದಿರುವ ಬಾಣದಿಂದ ಅಲ್ಲಮನ ಮನ ಅಳುಕಿರಬಹುದು. ಈಗ ಎಚ್ಚೆತ್ತುಕೊಂಡು ಎಲೈ ಮನ್ಮಥನೇ, ಮತ್ತೊಮ್ಮೆ ನಿನ್ನ ಬಾಣವನ್ನು ನನ್ನ ಮೇಲೆ ಎಸೆಯದಿರು, ಎಲ್ಲವೂ ವ್ಯರ್ಥವಾಗಬಹುದು. ನಾನೀಗಾಗಲೇ ಗೋಗೇಶ್ವರನ ವಿರಹದಲ್ಲಿ ಬೆಂದಿರುವೆ. ಮತ್ತೊಮ್ಮೆ ನನ್ನನ್ನು ಸುಡುವುದು ನಿನ್ನಿಂದ ಸಾಧ್ಯವೆ? ಎನ್ನುವನು. ಅಲ್ಲಮನು ಆತ್ಮಾವಲೋಕನ ಮಾಡಿಕೊಂಡು ಅಶಾಶ್ವತವಾದ ಲೌಕಿಕ ಸುಖವನ್ನು ಬಿಟ್ಟು ಶಾಶ್ವತವಾದ ಸುಖವನ್ನು ಪಡೆಯಲು ದೈಹಿಕ ಮತ್ತು ಮಾನಸಿಕವಾಗಿ ಅನೇಕ ಯಾತನೆಗಳನ್ನು ಅನುಭವಿಸಿದ್ದನು. ಇವರ ಆತ್ಮವಿಮರ್ಶೆ ಮಾಡಿಕೊಳ್ಳುವಂತಹ ವಚನಗಳನ್ನು ಓದಿದಾಗ ಈ ಮಾತು ಸತ್ಯವೆನಿಸುತ್ತದೆ. ಅಲ್ಲಮನು ಆರಾಧ್ಯ ದೈವನಾದ ಗೋಗೇಶ್ವರನ ಮೊರೆ ಹೊಕ್ಕು, ಆರಾಧಿಸಿ, ಶೂನ್ಯಸಿಂಹಾಸನಪೀಠದ ಅಧ್ಯಕ್ಷನಾಗಿ, ಶರಣರಿಗೆ ನೀತಿ ಮಾರ್ಗಗಳನ್ನು ಬೋಧಿಸುತ್ತ ಬದುಕನ್ನು ಸಾರ್ಥಕ ಪಡಿಸಿಕೊಳ್ಳುತ್ತಾನೆ.

ಸಾಮಾಜಿಕ ಸುಧಾರಕರು ಸಮಾನತೆಗಾಗಿ ಜಾತಿ ವ್ಯವಸ್ಥೆಯನ್ನು ತೊಲಗಿಸಲು ಪಣ ತೊಟ್ಟವರು. ತಮ್ಮ ಅನುಭವಗಳನ್ನು ವಚನಗಳ ಮೂಲಕ ಅಭಿವ್ಯಕ್ತಪಡಿಸಿ ಪಂಡಿತರು. ಪಾಮರರು, ಮಕ್ಕಳು, ವಯಸ್ಕರರಿಂದ ಹಿಡಿದು ವಯೋವೃದ್ಧರವರೆಗೆ ಸಾಮಾಜಿಕ ಕ್ರಾಂತಿ ಗೈದವರು. ಇವರಲ್ಲಿ 'ಭಕ್ತಿ ಭಂಡಾರಿ' ಎಂದು ಖ್ಯಾತರಾದವರು ಬಸವಣ್ಣನವರು. "ಕೆಲವೊಮ್ಮೆ ಆಧ್ಯಾತ್ಮಿಕ ವಿಚಾರವು ನಿರುದ್ಯೋಗಿಗಳ ನಿತ್ಯ ವ್ಯವಹಾರವಾಗಿತ್ತು. ಭಗ್ನಾಶರ ಗಾಳಿಗೋಪುರವಾಗಿತ್ತು. ತ್ರಿಕರಣವಂಚಕರ ಗುಪ್ತಗುಹೆಯಾಗಿತ್ತು! ಹನ್ನೆರಡನೇ ಶತಮಾನ ಕನ್ನಡ ನಾಡಿನ ಅಣ್ಣ ಬಸವಣ್ಣನವರ ಪಾಲಿಗಾದರೋ ವ್ಯಷ್ಟಿ–ಸಮಷ್ಟಿ ಜೀವನಸಂಸ್ಕರಣಕ್ಕೆ ಆಧಾರವಾಗಿತ್ತು. ಅವರ ಅಂತಃಪ್ರೇರಣೆಯ ಅನಿವಾರ್ಯ ಹವ್ಯಾಸವಾಗಿತ್ತು. ಮತ್ತು ಅವರ ಅಂತರಂಗದ ಅಭಿವ್ಯಕ್ತಿಗೆ ಸಮುಚಿತವಾದ ಸಮರ್ಥ ಬಹಿರಂಗ ವಿನ್ಯಾಸವಾಗಿತ್ತು"[4] ಅಂತರಂಗ ಮತ್ತು ಬಹಿರಂಗ ಶುದ್ಧಿಗೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದರು. ಅವರ ವಚನಗಳು ಸಾರ್ವಕಾಲಿಕ ಮೌಲ್ಯವುಳ್ಳವುಗಳು. ನೀತಿ ಬೋಧನೆಯೊಂದಿಗೆ ಪ್ರತಿಯೊಬ್ಬರೂ ಆತ್ಮವಿಮರ್ಶೆ ಮಾಡಿಕೊಳ್ಳುವ ಅವರ ವಚನದ ಮಾದರಿಯೊಂದು ಹೀಗಿದೆ.

ಕಳಬೇಡ ಕೊಲಬೇಡ
ಹುಸಿಯ ನುಡಿಯಲು ಬೇಡ, ಮುನಿಯಬೇಡ
ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ
ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ,
ಇದೇ ಬಹಿರಂಗ ಶುದ್ಧಿ, ಇದೇ
ನಮ್ಮ ಕೂಡಲ ಸಂಗಮದೇವನೊಲಿಸುವ ಪರಿ[5]

ಬುವಿಯಲ್ಲಿ ವಾಸಿಸುವ ಪ್ರತಿಯೊಬ್ಬರೂ ಶುದ್ಧ ಜೀವನದ ಮಾರ್ಗವನ್ನು ಕಂಡುಕೊಳ್ಳಬೇಕು. ಇರುವ ಅಲ್ಪ ಸಮಯದಲ್ಲಿ ಮನದ ಕಲ್ಮಶಕ್ಕೆ ಅವಕಾಶ ನೀಡಬಾರದು. ಎಲ್ಲರೂ ಮಾನವೀಯತೆ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ಕಳ್ಳತನ ಮಾಡಬಾರದು, ಕೊಲೆ ಮಾಡಬಾರದು, ಸುಳ್ಳು ಹೇಳಬಾರದು, ಕೋಪಿಸಿಕೊಳ್ಳಬಾರದು. ಇತರರ ಪ್ರಗತಿಯನ್ನು ಸಹಿಸಿಕೊಳ್ಳಬೇಕು, ಆತ್ಮ ಪ್ರಶಂಸೆಯಲ್ಲಿ ತೊಡಗಬಾರದು, ಎಲ್ಲರನ್ನೂ ತೆಗಳಬಾರದು, ಆತ್ಮೋದ್ಧಾರಕ್ಕೆ ಆತ್ಮ ಶುದ್ಧಿಗೆ ಇದೇ ಸರಳಮಾರ್ಗ ಎಂದು ಕುಜನರಿಗೆ ಹೇಳಿದ ನೀತಿ ಮಾತುಗಳು ಮನುಷ್ಯರಲ್ಲಿನ ಸಪ್ತ ಅವಗುಣಗಳನ್ನು ಕಳೆಯಲು ಸಹಾಯಕವಾಗಿವೆ. ಅಂತರಂಗ ಶುದ್ಧಿ ಮತ್ತು ಬಾಹ್ಯ ಶುದ್ಧಿ ಶುದ್ಧವಾಗಿದ್ದರೇ, ನಿರಾಕಾರನಾದ ದೇವರನ್ನು ಒಲಿಸಿಕೊಳ್ಳುವ ಹಾದಿಯು ಸುಗಮವಾಗುವುದು. ನಮ್ಮ ವ್ಯಕ್ತಿತ್ವಕ್ಕೆ ಮೆರಗು ಬರುವುದು. ನಾಲ್ಕು ದಿನದ ಈ ಬಾಳು ಮಘಮಘಿಸುತಿರಲಿ ಎನ್ನುವುದು ವಿಶ್ವಪ್ರೇಮಿ ಬಸವಣ್ಣನವರ ಆಶಯವಾಗಿದೆ.

ಮತ್ತೋರ್ವ ಪ್ರಸಿದ್ಧ ವಚನಗಾರ್ತಿ, ವಚನ ಸಾಹಿತ್ಯದಲ್ಲಿ ಉಜ್ವಲ ನಕ್ಷತ್ರದಂತೆ ಕಂಗೊಳಿಸಿದ ಮಹಾಮಾತೆ, ಶ್ರೇಷ್ಠ ಅನುಭಾವಿ ಅಕ್ಕಮಹಾದೇವಿಯವರು. ಆತ್ಮಸಾಕ್ಷಿಗೆ ವೈರುಧ್ಯವಾದುದನ್ನು ಧೈರ್ಯದಿಂದ ವಿರೋಧಿಸಿ ಲೌಕಿಕ ದಾಂಪತ್ಯವನ್ನು ತ್ಯಜಿಸಿ ಅಲೌಕಿಕ ದಾಂಪತ್ಯದೆಡೆಗೆ ಸಾಗಿದಳು. ಆತ್ಮವಿಮರ್ಶೆ ಮಾಡಿಕೊಂಡು ತನ್ನಲ್ಲಿರುವ ದುರಾಸೆಗಳನ್ನು ತೊಲಗಿಸಲು ತನ್ನ ಆರಾಧ್ಯ ದೈವನಾದ ಚೆನ್ನ ಮಲ್ಲಿಕಾರ್ಜುನನಲ್ಲಿ ಪರಿಪರಿಯಿಂದ ವಿನಮ್ರವಾಗಿ ಬೇಡಿಕೊಳ್ಳುತ್ತಾಳೆ. ಅವಳ ವಚನಗಳಲ್ಲಿ ಅಂತರಂಗದ ಶೋಧನೆ, ಯಾತನೆ ಓದುಗರಲ್ಲಿ ಭಕ್ತಿ, ವೈರಾಗ್ಯವನ್ನು ಮೂಡಿಸಿವೆ.

ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ
ತನ್ನ ನೂಲ ತನ್ನನೆ ಸುತ್ತಿ ಸಾವಂತೆ
ಮನಬಂದುದನು ಬಯಸಿ ಬೇವುತ್ತಿದ್ದೆನಯ್ಯಾ
ಎನ್ನ ಮನದ ದುರಾಸೆಯ ಮಾಣಿಸಿ ನಿಮ್ಮತ್ತ ತೋರಾ
ಚೆನ್ನಮಲ್ಲಿಕಾರ್ಜುನಾ[6]

ರೇಷ್ಮೆ ಹುಳು ತನ್ನ ಸಂತೋಷಕ್ಕಾಗಿ, ಆತ್ಮ ರಕ್ಷಣೆಗಾಗಿ ತನ್ನ ಶರೀರದಿಂದ ಉತ್ಪತ್ತಿಯಾಗುವ ನೂಲಿನಿಂದ ತನ್ನ ಸುತ್ತಲೂ ಗೂಡನ್ನು ಅಕ್ಕರೆಯಿಂದ ನಿರ್ಮಿಸಿಕೊಳ್ಳುತ್ತದೆ. ಕೊನೆಗೊಮ್ಮೆ ಆ ನೂಲಿನಿಂದಲೇ ಉಸಿರಾಡದೆ ಅದರಲ್ಲಿ ಬೆಂದು ಜೀವ ಕಳೆದುಕೊಳ್ಳುತ್ತದೆ. ರೇಷ್ಮೆ ನೂಲಿನಂತಿರುವ ವಿರಹ ವೇದನೆಯು ಅಕ್ಕ ಮಹಾದೇವಿಯನ್ನು ಹೈರಾಣಾಗಿ ಮಾಡಿದೆ. ನಿರಾಕಾರನಾದ ಚೆನ್ನಮಲ್ಲಿಕಾರ್ಜುನನ ಪಡೆಯಲೇಬೇಕೆನ್ನುವ ಹಠ ಅವಳ ದುರಾಸೆಗೆ ಎಡೆಮಾಡಿಕೊಟ್ಟಿತು. ಅವಳ ನಿಷ್ಕಲ್ಮಶವಾದ ಮನಸ್ಸು ವಿರಹ ವೇದನೆಯಿಂದ ಕಲ್ಮಶವಾಯಿತು. ಅಂತರಾತ್ಮವನ್ನು ಅರಿತು ಮನದಲ್ಲಿರುವ ದುರಾಸೆಗಳನ್ನು ನಿಲ್ಲಿಸಲು ಮತ್ತು ಮುಕ್ತಿಯನ್ನು ಕಾಣುವ ಬಗೆಯನ್ನು ತೋರಲು ಚೆನ್ನಮಲ್ಲಿಕಾರ್ಜುನನಲ್ಲಿ ಅಂಗಲಾಚಿ ಬೇಡಿದಳು. ಇದರಿಂದಾಗಿ ದೇವರನ್ನು ಕಾಣಲು ಮತ್ತು ದರ್ಶನ ಪಡೆಯಲು ಮಾನವರಲ್ಲಿ ಯಾವುದೇ ದುರಾಸೆಗಳು ಇರಬಾರದು. ನಮ್ಮ ಭಕ್ತಿಗೆ ಮತ್ತು ವ್ಯಕ್ತಿತ್ವಕ್ಕೆ ಕಳಂಕ ಬರುವುದು ನಮ್ಮಲ್ಲಿರುವ ದುರಾಸೆಗಳಿಂದಲೇ ಎನ್ನುವುದು ಅಕ್ಕ ಮಹಾದೇವಿಯ ಮನದಾಳದ ನೋವಿನ ಮಾತಾಗಿದೆ.

ಶಿವಶರಣ, ವಚನಕಾರ, ಪವಾಡ ಪುರುಷ ಹಾಗೂ ಕರ್ಮಯೋಗಿ ಎಂದು ಪ್ರಸಿದ್ಧನಾಗಿದ್ದ ಸಿದ್ಧರಾಮನು 'ಕಪಿಲಸಿದ್ಧ ಮಲ್ಲಿಕಾರ್ಜುನ' ಎಂಬ ಅಂಕಿತದಲ್ಲಿ ಅನೇಕ ವಚನಗಳನ್ನು ರಚಿಸಿದ್ದಾನೆ. ಬಾಲ್ಯದಲ್ಲಿ ದನ ಕಾಯುವ ಕಾಯಕದಲ್ಲಿ ನಿರತನಾಗಿದ್ದ ಸಿದ್ಧರಾಮನು ಶ್ರೀಶೈಲಕ್ಕೆ ಹೋಗಿ ಮಲ್ಲಿಕಾರ್ಜುನನ ದರ್ಶನ ಪಡೆದರು. ಅಲ್ಲಿಂದ ಮರಳಿದ ನಂತರ ಇಂದಿನ 'ಸೊಲ್ಲಾಪುರ' ಎಂದು ನಾಮಾಂಕಿತಗೊಂಡ 'ಸೊನ್ನಲಿಗೆ'ಯಲ್ಲಿ ದೇವಾಲಯ ನಿರ್ಮಿಸಿ, 'ಶರಣರ ಶರೀರಂ ವೃಥಾ ಸವೆಯಲಾಗದು' ಎಂದು ಸಮಾಜೋಪಯೋಗಿ ಕಾರ್ಯಗಳನ್ನು ಕೈಗೊಂಡು, ತನ್ನ ಕರ್ಮಭೂಮಿಯನ್ನು 'ಅಭಿನವ ಶ್ರೀಶೈಲ' ಎಂದು ಪ್ರಖ್ಯಾತಗೊಳಿಸಿದ್ದಾನೆ. ಅಂದು ಕುಗ್ರಾಮವಾಗಿದ್ದ ಸೊನ್ನಲಿಗೆಯು ನಂತರ 'ಭೂಕೈಲಾಸ' ಎನಿಸಿಕೊಳ್ಳುತ್ತದೆ. ಚೆನ್ನಬಸವಣ್ಣನಿಂದ ಇಷ್ಟಲಿಂಗದೀಕ್ಷೆಯನ್ನು ಪಡೆದು ಕಲ್ಯಾಣದಲ್ಲಿ ಅವಿರ್ಭವಿಸಿದ್ದ ಅನುಭವ ಮಂಟಪದಲ್ಲಿ ಜರಗುವ

ಚರ್ಚಾಗೋಷ್ಠಿಗಳಲ್ಲಿ ಭಾಗವಹಿಸಿ, ಶೂನ್ಯಸಿಂಹಾಸನದ ಮೂರನೇ ಪೀಠಾಧಿಕಾರಿಯಾಗಿ ಗುರುತಿಸಿಕೊಂಡು ಮಹಾಶಿವಯೋಗಿಯಾದನು. "ಸಿದ್ಧರಾಮನದು ಕವಿಹೃದಯ, ಉತ್ಸಾಹ, ಲವಲವಿಕೆ ಅವನ ವಚನಗಳ ಸ್ಥಾಯಿಭಾವ. ಹೇಳಬೇಕಾದುದ್ದನ್ನು ಮನಮುಟ್ಟುವಂತೆ ಹೇಳುವುದು ಅವನ ವಚನಗಳ ಶೈಲಿಯ ಪ್ರಮುಖಗುಣ. ಕಿರಿದಾದ ವಾಕ್ಯಗಳಲ್ಲಿ ಹಿರಿದಾದ ಅರ್ಥವನ್ನು ತುಂಬುವ ಜಾಯಮಾನ ಅವನದು. ಅವನ ವಚನಗಳ ಭಾಷೆ ಆಡುನುಡಿಯಿಂದ ಪರಿಪುಷ್ಟವಾಗಿದೆ"[7] ಇವರ ವಚನಗಳನ್ನು ಅಧ್ಯಯನ ಮಾಡುವಾಗ ಸರಳವಾಗಿರುವ ಮತ್ತು ಅರ್ಥಗರ್ಭಿತವಾದ ಪದಗಳು ಮನಸ್ಸಿಗೆ ಮುದ ನೀಡುತ್ತವೆ.

ಹಸಿವು ದೋರದ ಮುನ್ನ, ತೃಷೆದೊರದ ಮುನ್ನ
ವ್ಯಾಧಿ ವಿಪತ್ತುಗಳು ಬಂದಡಸದ ಮುನ್ನ
ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗವ ಪೂಜಿಸೋ ಮುನ್ನ ಮುನ್ನ[8]

ಹಸಿವು, ತೃಷೆ, ವ್ಯಾಧಿ, ವಿಪತ್ತುಗಳು ಬರುವುದಕ್ಕಿಂತ ಮುಂಚೆ ಕಪಿಲಸಿದ್ಧ ಮಲ್ಲಿಕಾರ್ಜುನನನ್ನು ಪೂಜಿಸಬೇಕು. ಶಿವನು ಸರ್ವಂತರ್ಯಾಮಿ, ಲೋಕೋದ್ಧಾರಕ, ಭಕ್ತಿಯಿಂದ ಆರಾಧಿಸಿದರೆ, ಬೇಡಿದ್ದೆಲ್ಲವನ್ನೂ ನೀಡುವ ಕರುಣಾಮಯಿ, ಜಗತ್ತಿನ ಪ್ರತಿ ಜೀವಿಯ ಕಣಕಣದಲ್ಲಿ ನಿಂದಿಹನು. ಭಗವಂತನಿಂದ ಸೃಷ್ಟಿಯಾದ ನಾವೆಲ್ಲರೂ ಬಂದ ಕಾರ್ಯವನ್ನು ನೆನೆಯದೆ, ನಮ್ಮ ಸ್ವಾರ್ಥಕ್ಕಾಗಿ ಬದುಕುತ್ತಿದ್ದೇವೆ. ಬಡತನ, ದಾಹ, ರೋಗಗಳು, ಅಪಾಯಗಳು ನಮ್ಮನ್ನಾವರಿಸಿಕೊಂಡಾಗ ಮಾತ್ರ ಶಿವನನ್ನು ಸ್ಮರಿಸಿಕೊಳ್ಳುವೆವು. ಕಷ್ಟಗಳು ಎದುರಾದಾಗ ದೇವರು ನಮ್ಮ ಮೊರೆಯನ್ನು ಆಲಿಸುವುದಿಲ್ಲ. ರೋಗರುಜಿನಗಳಿಗೆ ಬಲಿಯಾಗುವುದಕ್ಕಿಂತ ಮುಂಚಿತವಾಗಿ ಮಲ್ಲಿಕಾರ್ಜುನನನ್ನು ಪೂಜಿಸಿದರೆ, ಮುಂಬರುವ ಕಷ್ಟಗಳನ್ನು ಎದುರಿಸುವ ಆತ್ಮಸ್ಥೈರ್ಯ ಕರುಣಿಸುವನು ಎನ್ನುವುದು ಸಿದ್ಧರಾಮನ ಆಂತರ್ಯದ ಒಳ ತುಡಿತವಾಗಿರಬಹುದು.

ಈ ಸೃಷ್ಟಿಯ ವಿಸ್ಮಯದಲ್ಲಿ ಪ್ರತಿಯೊಬ್ಬರೂ ನನ್ನ ಕರ್ಮ, ನನ್ನ ಅಭಿಲಾಷೆ, ನನ್ನ ಸಂಬಂಧ, ನನ್ನ ಸಾಮರ್ಥ್ಯ, ನನ್ನ ಮಹತ್ವ, ನನ್ನ ಸಮಾಜ, ಒಳಿತು ಕೆಡಕುಗಳು ಎಲ್ಲವನ್ನೂ ನಮ್ಮ ಅರಿವಿನ ಮಿತಿಯಲ್ಲಿ ಅಂತರಂಗದ ಶೋಧನೆಗೆ ಒಳಪಡಿಸಬೇಕು. ಆಗ ನಮ್ಮ ಜೀವನ 'ಪದ್ಮಪತ್ರದ ಮೇಲಿನ ಜಲಬಿಂದುವಿನಂತೆ' ತಿಳಿಯಾಗಿ ಶುದ್ಧವಾಗಿರುತ್ತದೆ. ಇದಕ್ಕೆ ಉತ್ತಮ ನಿದರ್ಶನ ಆಯ್ದಕ್ಕಿ ಲಕ್ಕಮ್ಮನವರ ಪ್ರಾಮಾಣಿಕತೆ ಹಾಗೂ ಶುದ್ಧವಾದ ದಾಸೋಹ ಕಾಯಕ. ಹೆಸರೇ ಸೂಚಿಸುವಂತೆ ಶರಣರ ಮಹಾಮನೆಯ ದಾಸೋಹದ ಅಂಗಳದಲ್ಲಿ ಚೆಲ್ಲಿದ ಅಕ್ಕಿಯನ್ನು ಆಯ್ದುಕೊಂಡು ಬಂದು ಅಡುಗೆ ಮಾಡಿ, ನಿಷ್ಕಲ್ಮಷವಾಗಿ ದಾಸೋಹ ಕಾರ್ಯಗೈಯುತ್ತಿದ್ದರು. ಇವರ ವಚನ ಆತ್ಮವಿಮರ್ಶೆಗೆ ಎಡೆಮಾಡಿಕೊಟ್ಟಿವೆ.

ಆಸೆಯೆಂಬುದು ಅರಸಿಂಗಲ್ಲದೆ
ಶಿವಭಕ್ತರಿಗುಂಟೇ ಅಯ್ಯಾ?
ರೋಷವೆಂಬುದು ಯಮದೂತರಿಗಲ್ಲದೆ
ಅಜಾತರಿಗುಂಟೆ ಅಯ್ಯಾ?
ಈಸಕ್ಕಿಯಾಸೆ ನಮಗೇಕೆ? ಈಶ್ವರನೊಪ್ಪ
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ದೂರಮಾರಯ್ಯ[9]

ನಾವು ಕೈಗೊಂಡ ಕೈಂಕಾರ್ಯ, ನಮ್ಮ ಭಕ್ತಿ ಹಾಗೂ ನಡೆದುಕೊಳ್ಳುವ ರೀತಿ ನಮ್ಮ ಆತ್ಮೋನ್ನತಿಗೆ ಕಾರಣವಾಗುತ್ತದೆ. ನಮ್ಮಲ್ಲಿರುವ ಅತಿಯಾಸೆ, ರೋಷಾವೇಶ ಅಧೋಗತಿಗೆ ಕೊಂಡೊಯ್ಯುತ್ತದೆ. ಸಾಮ್ರಾಜ್ಯವನ್ನು ವಿಸ್ತರಿಸಬೇಕೆಂಬ ಅತಿಯಾಸೆ ರಾಜರಿಗಿರುತ್ತದೆ, ಶಿವಭಕ್ತರಿಗಿರದು. ರೋಷವೆಂಬುದು ಯಮನ ಸೇವಕರಿಗೆ ಇರುವುದು, ಮರುಜನ್ಮವಿಲ್ಲದ ಈಶ್ವರನಿಗೆ ಇರುವುದಿಲ್ಲ. ಆಸೆಗೂ ಮತ್ತು ಶಿವಭಕ್ತರಿಗೂ 'ಅಜಗಜಾಂತರ' ವ್ಯತ್ಯಾಸವಿದೆ. ಶಿವಭಕ್ತರು ಮಾಡುವಂತಹ ಯಾವುದೇ ಕಾರ್ಯಗಳಲ್ಲಿ ಸತ್ಯಶುದ್ಧಗಳಿಕೆಯಿರಬೇಕು. ಶಿವಭಕ್ತರ ಮನದಲ್ಲಿ ಆಸೆಗೆ ಸಾಸಿವೆ ಕಾಳಿನಷ್ಟೂ ಸಹ ಅವಕಾಶ ಒದಗಿಸಬಾರದು. ಕಸಗೂಡಿಸಿ ಪ್ರಾಮಾಣಿಕತೆಯಿಂದ ಇಲ್ಲಿಯವರೆಗೆ ಆಯ್ದುಕೊಂಡು ಬಂದ ಅಕ್ಕಿಯಿಂದ ಕೈಗೊಂಡ ದಾಸೋಹದ ಕೈಂಕರ್ಯವು ವ್ಯರ್ಥವಾಗುವುದೆಂಬ ಚಿತ್ತವೃತ್ತಿಯ ಕಳವಳ ಲಕ್ಕಮ್ಮಳದು. ಈಶ್ವರನು ಸಮಾಜಕ್ಕೆ ಒಳಿತು ಮಾಡುವ ಕಾಯಕವನ್ನು ಮೆಚ್ಚುವನು. ಕೇಡನ್ನು ಬಗೆಯುವ, ಅತಿಯಾಸೆಯಿಂದ ಮಾಡುವ ಕೆಲಸಗಳನ್ನು ದೇವರು ಎಂದಿಗೂ ಒಪ್ಪುವುದಿಲ್ಲ. ಶಿವಭಕ್ತರು ಮತ್ತು ಇತರರು ಯಾರೇ ಆಗಿರಲಿ ಸತ್ಯನಿಷ್ಠ ಭಾವದಲ್ಲಿ ನಡೆದುಕೊಳ್ಳಬೇಕು ಎಂಬುದು ಆಯ್ದಕ್ಕಿ ಲಕ್ಕಮ್ಮಳ ಇಂಗಿತವಾಗಿದೆ.

ಹನ್ನೆರಡನೆಯ ಶತಮಾನದ ವಚನಕಾರ್ತಿಯರಲ್ಲಿ ಸತ್ಯಕ್ಕರವರು ಓರ್ವ ಶಿವಭಕ್ತರಾಗಿದ್ದರು. ಶಿವಶರಣರ ಮನೆಯ ಅಂಗಳದಲ್ಲಿ ಕಸಗೂಡಿಸುತ್ತ ತನ್ನ ಕಾಯಕದಲ್ಲಿಯೇ ಶಿವನನ್ನು ಆರಾಧಿಸುತ್ತಿದ್ದಳು. ಸತ್ಯಕ್ಕರವರ ಹೆಸರೇ ಸೂಚಿಸುವಂತೆ ಪ್ರಾಮಾಣಿಕತೆ ಮತ್ತು ಸತ್ಯ ಇವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿತ್ತು. ಅವಿವಾಹಿತವಾಗಿಯೇ ಆಧ್ಯಾತ್ಮಿಕ ಸಾಧನೆಗೈದ ಮಹಾಶಿವಶರಣೆ. ಇವರು ಅನೇಕ ವಚನಗಳನ್ನು 'ಶಂಭುಜಕ್ಕೇಶ್ವರ' ಎಂಬ ಅಂಕಿತನಾಮದೊಂದಿಗೆ ರಚಿಸಿದ್ದಾರೆ.

ಅರ್ಚನೆ ಪೂಜನೆ ನೇಮವಲ್ಲ;
ಮಂತ್ರತಂತ್ರ ನೇಮವಲ್ಲ;
ಧೂಪ ದೀಪಾರತಿ ನೇಮವಲ್ಲ;
ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೆ ನೇಮ.
ಶಂಭುಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ ನಿತ್ಯನೇಮ.[10]

ಆತ್ಮಾವಲೋಕನಕ್ಕೆ ಎಡೆಮಾಡಿಕೊಟ್ಟಿರುವ ಸತ್ಯಕ್ಕರವರ ವಚನ ಸತ್ಯಕ್ಕೆ ಹತ್ತಿರವಾದ ಮಾತು. ದೇವರ ಮುಂದೆ ಭಕ್ತಿಯಿಂದ ಅರ್ಚನೆ, ಪೂಜನೆ, ಮಂತ್ರ, ತಂತ್ರ, ಧೂಪ, ದೀಪಾರತಿ ಮಾಡುವುದು ನೇಮವಲ್ಲ. ಪರಸ್ತ್ರೀ, ಪರಧನ ಮತ್ತು ಪರದೈವಗಳ ಹಿಂದೆ (ಆರಾಧಿಸುವ ದೇವರನ್ನು ಬಿಟ್ಟು) ದುಂಬಾಲು ಬೀಳದಿರುವದೇ ನಿಜವಾದ ವ್ರತ. ವ್ರತ ಯಾವಾಗಲು ಪ್ರಾಮಾಣಿಕತೆಯಿಂದ ಕೂಡಿರಬೇಕು. ಅಪ್ರಾಮಾಣಿಕತೆ, ಅಸತ್ಯ, ಡಾಂಭಿಕತನ, ವಂಚನೆ, ದುರ್ಬುದ್ಧಿ, ದುರಾಚಾರಗಳು ಮನುಷ್ಯನ ವ್ಯಕ್ತಿತ್ವಕ್ಕೆ ಕಳಂಕ ತರುತ್ತವೆಂದು ಹೇಳಿದ್ದಾಳೆ. ಹಿಂದಿನಿಂದ ಅನುಸರಿಸಿಕೊಂಡು ಬಂದ ಪೂಜೆ ಪುನಸ್ಕಾರದ ವಿಧಿವಿಧಾನಗಳನ್ನು ತ್ಯಜಿಸಲು ಮತ್ತು ಸಮಾಜದ ಅಂಕುಡೊಂಕುಗಳನ್ನು ತಿದ್ದುವಲ್ಲಿ ಸತ್ಯಕ್ಕಳ ವಚನಗಳು ತುಂಬಾ ಸಹಾಯಕವಾಗಿವೆ.

ಒಟ್ಟಿನಲ್ಲಿ ವಚನಗಳು ಅನುಭಾವಿಗಳ ಆತ್ಮಮಥನದಿಂದ ಜನಿಸಿ, ಆತ್ಮಶೋಧನೆಗೆ ಅವಕಾಶವಿತ್ತ ವೈಶಿಷ್ಟ್ಯತೆಯುಳ್ಳ ಸಾಹಿತ್ಯ. ವಚನಗಳಲ್ಲಿ ಹೃದಯವಂತಿಕೆ, ಸ್ವಾನುಭವ, ಸರಳ ಭಕ್ತಿಯ ಪಾರಮ್ಯತೆ, ಸಾಮಾಜಿಕ ಚಿಂತನೆ, ಆಧ್ಯಾತ್ಮಿಕ ಅನುಭೂತಿ, ವ್ಯಕ್ತಿತ್ವ ಪರಿವರ್ತನೆಯ ಉಕ್ತಿಗಳು, ಆಚಾರ ವಿಚಾರಗಳು, ನಡೆನುಡಿ, ಸರಳ ಜೀವನದ ಚಿಂತನೆ, ಸಮಾಜದ ಕುಂದು ಕೊರೆತಗಳು, ಅಂತರಂಗದ ಶೋಧನೆಯೊಂದಿಗೆ ಮಡುಗಟ್ಟಿವೆ. ಮನದಲ್ಲಿ ಹೆಪ್ಪುಗಟ್ಟಿದ ಒತ್ತಡಗಳಿಗೆ ಸಂಜೀವಿನಿಯಂತೆ ಕಾರ್ಯನಿರ್ವಹಿಸುತ್ತಿವೆ. ಕವಲುದಾರಿಯಲ್ಲಿ ಸಾಗುತ್ತಿರುವ ಇಂದಿನ ಯುವ ಪೀಳಿಗೆಗೆ ಅಂತರಂಗದ ಸತ್ಯದರ್ಶನ ಮಾಡುತ್ತಿವೆ. ಸರ್ವರಲ್ಲಿ ಸಮಾನತೆಯ ಭಾವನೆಗಳನ್ನು ಹುಟ್ಟಿಹಾಕಿವೆ. ಹನ್ನೆರಡನೆಯ ಶತಮಾನದ ವಚನಕಾರರು ತಮ್ಮ ಅಲ್ಪ ಆಯುಷ್ಯವನ್ನು ಏಕದೇವೋಪಾಸನೆಗೆ ಮೀಸಲಿಟ್ಟು ಜೀವನದ ಸಾರ್ಥಕತೆಯನ್ನು ಮೆರೆದಿದ್ದಾರೆ. ಅಂತರಂಗನ್ನು ಶೋಧಿಸಿಸಲು ಮತ್ತು ಕಳಂಕ ರಹಿತ ಜೀವನ ಸಾಗಿಸಲು ಅತ್ಯುಪಯುಕ್ತವಾದ ಮಾಹಿತಿಗಳನ್ನು ತಮ್ಮ ವಚನಗಳ ಮೂಲಕ ಜನಸಾಮಾನ್ಯರಿಗೆ ತಲುಪಿಸಿದ್ದಾರೆ.

**ಪರಾಮರ್ಶನಾ ಗ್ರಂಥಗಳು**


1. ಡಾ. ಎಲ್. ಬಸವರಾಜು, ದೇವರ ದಾಸಿಮಯ್ಯನ ವಚನಗಳು, ಪುಟ ಸಂಖ್ಯೆ, 74 (2016)
2. ಪ್ರಥಮ ಪಿ.ಯು.ಸಿ ಕನ್ನಡ ಪಠ್ಯ ಪುಸ್ತಕ, ಸಾಹಿತ್ಯ ಸಂಚಲನ, ಪುಟ ಸಂಖ್ಯೆ, 10 (2019)
3. ಎಂ. ಚಿದಾನಂದ ಮೂರ್ತಿ. ವಚನ ಸಾಹಿತ್ಯ, ಪುಟ ಸಂಖ್ಯೆ, 60 (2009)
4. ಡಾ. ಎಲ್. ಬಸವರಾಜು, ಬಸವಣ್ಣನವರ ವಚನಗಳು, ಪುಟ ಸಂಖ್ಯೆ, 27 (2017)
5. ಡಿ. ಎಸ್. ವಿಶ್ವನಾಥ, ವಚನಶಿಲ್ಪ, ಪುಟ ಸಂಖ್ಯೆ, 07 (2009)
6. ಡಾ. ಚೆನ್ನಬಸವಯ್ಯ ಹಿರೇಮಠ, ವಚನಗಳ ಸಂಗ್ರಹ, ಪುಟ ಸಂಖ್ಯೆ, 45 (2020)
7. ಡಾ.ಎಸ್. ವಿದ್ಯಾಶಂಕರ, ಸಿದ್ಧರಾಮೇಶ್ವರ ವಚನಸಂಪುಟ, ಪುಟ ಸಂಖ್ಯೆ, 44 (2021)
8. ಡಾ. ರಾಜಪ್ಪ ದಳವಾಯಿ, ಕನ್ನಡ ಸಾಹಿತ್ಯ ಕೋಶ, ಪುಟ ಸಂಖ್ಯೆ, 98 (2018)
9. ಪ್ರೊ. ಎಸ್.ಜಿ ಸಿದ್ಧರಾಮಯ್ಯ, ವಚನ ಸಂಸ್ಕೃತಿ–ಸಾಹಿತ್ಯ ಸಂಗತಿ, ಪುಟ ಸಂಖ್ಯೆ, 46 (2013)
10. ಡಾ. ವೀರಣ್ಣ ರಾಜೂರ, ಶಿವಶರಣೆಯರ ವಚನ ಸಂಪುಟ, ಪುಟ ಸಂಖ್ಯೆ, 364 (2001)